# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಸುಳ್ಯ ದ.ಕ.

**ಸಿ.ಸಿ.ಸಂ.464/2025**

ಫಿರ್ಯಾದುದಾರರು ಃ ಸರ್ಕಾರದ ಪರ ಸುಬ್ರಹ್ಮಣ್ಯ ಆರಕ್ಷಕರು

ಃ ವಿರುದ್ಧ ಃ

ಆರೋಪಿಗಳು ಃ

1. **ಪ್ರಜ್ವಲ್ ಟಿ.ಆರ್ ಬಿನ್ ರಾಧಕೃಷ್ಣ,**
   ಪ್ರಾಯ 26 ವರ್ಷ,ವೃತ್ತಿಃ ಕೃಷಿ, ವಾಸಃ ತುಪ್ಪದ ಮನೆ,
   ಗುತ್ತಿಗಾರು ಗ್ರಾಮ, ಸುಳ್ಯ ತಾಲೂಕು, ದ.ಕ.

2. **ರಾಧಕೃಷ್ಣ, ಬಿನ್ ದಿ. ಮೊಂಟ ಗೌಡ,**
   ಪ್ರಾಯ 55 ವರ್ಷ, ವೃತ್ತಿಃ ಕೃಷಿ, ವಾಸಃ ತುಪ್ಪದ ಮನೆ,
   ಗುತ್ತಿಗಾರು ಗ್ರಾಮ, ಸುಳ್ಯ ತಾಲೂಕು, ದ.ಕ.

## ಃ ದೋಷಾರೋಪಣೆ ಃ

ಅರ್ಪಿತಾ ಬಿ .ಎ .(ಲಾ ), ಎಲ್ .ಎಲ್ .ಬಿ ., ಸಿ .ಜೆ ಮತ್ತು ಜೆ.ಎಂ.ಎಫ್.ಸಿ., ಸುಳ್ಯ ಆದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಗಳನ್ನು ಹೊರಿಸುತ್ತಿದ್ದೇನೆ.

ಮೊದಲನೇಯದಾಗಿ, ಆರೋಪಿಗಳಾದ ನೀವು ದಿನಾಂಕ 30.12.2024 ರಂದು ರಾತ್ರಿ ಚಾಸಾ-1 ಜಯರಾಮ ಬಿ.ಕೆ ರವರು ನಿಮ್ಮ ಪೈಕಿ 1 ನೇ ಆರೋಪಿಯಾದ ನಿಮಗೆ ಫೋನ್ ಕರೆ ಮಾಡಿ ತುಪ್ಪದ ಮನೆ ರಸ್ತೆಯ ಜಾಗದ ದಾಖಲಾತಿಗಳನ್ನು ಕೇಳಿದ್ದು, ನೀವು ನಾಳೆ ಕೊಡುವುದಾಗಿ ತಿಳಿಸಿದ್ದು, ದಿನಾಂಕ 31.12.2024 ರಂದು ಚಾಸಾ-1 ಜಯರಾಮ ಬಿ.ಕೆ ರವರು ಸಂಜೆ ಸಮಯ ತಮ್ಮ ತೋಟಕ್ಕೆ ಬರುವ ಮಂಗಗಳನ್ನು ಬೆದರಿಸುವರೇ ತನ್ನ ಬಾಬ್ತು ನಾಡಕೋವಿಯನ್ನು ತೆಗೆದುಕೊಂಡು ಹೋಗಿ ಮಂಗಗಳನ್ನು ಬೆದರಿಸಿ ನಂತರ ಮನೆ ಕಡೆಗೆ ಸಂಜೆ 06.30 ಗಂಟೆಗೆ ಬರುತ್ತಿರುವಾಗ ಗುತ್ತಿಗಾರು ಗ್ರಾಮದ, ಕಮಿಲ ಪುಂಚ್ಚಪ್ಪಾಡಿ ಎಂಬಲ್ಲಿ, ಆರೋಪಿಗಳಾದ ನೀವುಗಳು ಇದ್ದು, ನಿಮ್ಮಲ್ಲಿ, ಚಾಸಾ-1 ಜಯರಾಮ ಬಿ.ಕೆ ರವರು ತುಪ್ಪದ ಮನೆ ರಸ್ತೆಯ ಜಾಗದ ದಾಖಲಾತಿಗಳನ್ನು ಕೇಳಿದಾಗ, 1

ನೇ ಆರೋಪಿಯಾದ ನೀವು ಏಕಾಏಕಿ ನಿಮ್ಮ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ಜಯರಾಮ ಬಿ.ಕೆ ರವರ ಬಲಕಿವಿಗೆ ಮತ್ತು ಹಣೆಗೆ ಹಲ್ಲೆ ಮಾಡಿ ಚಾ.ಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ 118(1) ಸಹವಾಚಕ 3(5) ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಮಾಡಿರುವಿರಿ?

ಎರಡನೇಯಾಗಿ ಆರೋಪಿಗಳಾದ ನೀವು, ಅದೇ ದಿನ ಅದೇ ಸ್ಥಳ, ಅದೇ ಸಮಯದಲ್ಲಿ, 2 ನೇ ಆರೋಪಿಯಾದ ನೀವು ಚಾ.ಸಾ 1 ಜಯರಾಮ ಬಿ.ಕೆ ರವರ ಬಳಿ ಬಂದು ನಿನಗೆ ಯಾವ ಜಾಗದ ದಾಖಲಾತಿಗಳು ಬೇಕು "ಬೇವರ್ಸಿ ಸೋಳೆ ಮಗನೆ" ಎಂದು ಅವಾಚ್ಯವಾಗಿ ಬೈದಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ 352 ಸಹವಾಚಕ 3(5) ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಮಾಡಿರುವಿರಿ?

ಕೊನೇಯಾದಗಿ ಆರೋಪಿಗಳಾದ ನೀವು, ಅದೇ ದಿನ ಅದೇ ಸ್ಥಳ, ಅದೇ ಸಮಯದಲ್ಲಿ, ನಂತರ ಮುಂದಕ್ಕೆ ಜಾಗದ ವಿಷಯಕ್ಕೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ 351(2) ಸಹವಾಚಕ 3(5) ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಮಾಡಿರುವಿರಿ?.

ಮೇಲ್ಕಂಡ ಆರೋಪದ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳಃ ಸುಳ್ಯ
ದಿನಾಂಕಃ 24-10-2025

ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಸುಳ್ಯ,ದ.ಕ.